ಮೂಲ ದಾವಾ ಸಂಖ್ಯೆ 121/2025

ಪಿ ಡಬ್ಲ್ಯೂ-1

**<u>(ದಿನಾಂಕ 06.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)</u>**

**<u>ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಸಿ ಎನ್ ಎನ್ ವಕೀಲರಿಂದಃ-</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

ಪ್ರಥಮ ವರ್ತಮಾನ ವರದಿಯ ದೃಢಿಕೃತ ನಕಲು ನಿ ಪಿ 1 ಎಂದು, ದೂರಿನ ದೃಢಿಕೃತ ನಕಲು ನಿ ಪಿ 2 ಎಂದು, ಪಿರ್ಯಾದಿ ಮರು ಹೇಳಿಕೆಯ ದೃಢಿಕೃತ ನಕಲು ನಿ ಪಿ 3 ಎಂದು, ಅಂತಿಮ ವರದಿಯ ದೃಢಿಕೃತ ನಕಲು ನಿ ಪಿ 4 ಎಂದು, ಕೃತ್ಯ ಸ್ಥಳದ ಪಂಚನಾಮೆಯ ದೃಢಿಕೃತ ನಕಲು ನಿ ಪಿ 5 ಎಂದು, ಕಚ್ಚಾ ನಕಾಶೆಯ ದೃಢಿಕೃತ ನಕಲು ನಿ ಪಿ 6 ಎಂದು, ಪಂಚನಾಮೆಯ ಕಾಲಕ್ಕೆ ತೆಗೆದ ಭಾವ ಚಿತ್ರದ ದೃಢಿಕೃತ ನಕಲು ನಿ ಪಿ 7 ಎಂದು, ಜಪ್ತು ಪಂಚನಾಮೆಯ ದೃಢಿಕೃತ ನಕಲು ನಿ ಪಿ 8 ಎಂದು, ಜಪ್ತು ಪಂಚನಾಮೆಯ ಕಾಲಕ್ಕೆ ತೆಗೆದ ಭಾವ ಚಿತ್ರದ ದೃಢಿಕೃತ ನಕಲು ನಿ ಪಿ 9 ಎಂದು, ಗಾಯದ ಪ್ರಮಾಣ ಪತ್ರದ ದೃಢಿಕೃತ ನಕಲು ನಿ ಪಿ 10 ಎಂದು, ಅರ್ಜಿದಾರರ ಆಧಾರ ಕಾರ್ಡನ ನೋಟರಿ ಪ್ರತಿ ನಿ ಪಿ 11 ಎಂದು, ನಲವತ್ಮೂರು (43) ಮೆಡಿಕಲ್ ಬಿಲ್ಲುಗಳನ್ನು ಒಟ್ಟಾರೆಯಾಗಿ ನಿ ಪಿ 12 ಎಂದು, ಎಂಟು(8) ವೈದ್ಯಕೀಯ ಚೀಟಿಗಳು ಒಟ್ಟಾರೆಯಾಗಿ ನಿ ಪಿ 13 ಎಂದು, ಡಿಸ್ ಚಾರ್ಜ ಸಮ್ಮರಿ ನಿ ಪಿ 14 ಎಂದು, ಮೂರು ಎಕ್ಸರೇ ಫಿಲ್ಮಂಗಳು ಒಟ್ಟಾರೆಯಾಗಿ ನಿ ಪಿ 15 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.